(ii) ಮಡಿಕೇರಿ ಮತ್ತು ವಿರಾಜಪೇಟೆ ತಾಲ್ಲೂಕುಗಳಿಗೆ ಬೋರ್‌ವೆಲ್‌ಗಳನ್ನು ತೋಡುವುದು

SRI D. A. CHINNAPPA. — Mr. Speaker Sir, M. L. A.s of Kodagu District were requested to submit the list for the sanction of additional borewells. Accordingly they have given the same to the Assistant Engineer, PHE, Madikeri.

But I got the list of sanction of Additional borewells, at the end of Jan. 86, which shows only 17 borewells have been sanctioned to the Somawarpet Taluk at a cost of Rs. 3,40,000 why this kind of discrimination by sanctioning additional borewells only in Somawarpet Taluk without giving a borewell to Madikeri and Virajpet Taluk ? I want immediate steps to be taken by the concerned authorities to revise the sanction order to provide borewells to Mercara and Virajpet Taluks,

ಶ್ರೀ ಬಿ. ಆರ್. ಯಾವಗಲ್.— ಮಾನ್ಯ ಸದಸ್ಯರು ಹೇಳಿದ ಹಾಗೆ ಅವರು ಬೇಡಿಕೆಗಳನ್ನು ಕೊಟ್ಟರೆ, ಅವಶ್ಯಕತೆಗನುಗುಣವಾಗಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಲಾಗುವುದು.

(iii) ಖಾಸಗೀ ಕನ್ನಡೇತರರ ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ನೇಮಕ ಮಾಡುವುದು

ಶ್ರೀ ಎಸ್. ಕೆ ಕಾಂತ.— ಮಾನ್ಯ ಅಧ್ಯಕ್ಷರೇ, ಗೋಕಾಕ್‌ರವರ ವರದಿಯಂತೆ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡೇತರ ಶಾಲೆಗಳಿಗೆ ಕನ್ನಡ ವಿಷಯವನ್ನು ಭೋದಿಸಲು ಕನ್ನಡದ ಹೆಚ್ಚುವರಿ ಶಿಕ್ಷಕರನ್ನು ಕೊಟ್ಟಂತೆ, ಧನ ಸಹಾಯ ಪಡೆಯುವ ಕನ್ನಡೇತರರ ಖಾಸಗಿ ಶಾಲೆಗಳಲ್ಲಿಯೂ ಸಹ ಕನ್ನಡ ವಿಷಯ ಬೋಧನೆಯ ಬಗ್ಗೆ ಸರಕಾರಿ ಶಾಲೆಗಳಂತೆ ಶಿಕ್ಷಕರ ನೇಮಕಾತಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ದಯವಿಟ್ಟು ಮಾನ್ಯ ಶಿಕ್ಷಣ ಮಂತ್ರಿಗಳು ಸದನಕ್ಕೆ ತಿಳಿಸುವರೆ ?

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೇ, ಈ ವಿಷಯು ನನ್ನ ಕ್ಷೇತ್ರಿಯಲ್ಲಿ ಬರುವುದಿಲ್ಲ. ಮಾನ್ಯ ಗೋವಿಂದೇಗೌಡರಿಗೆ ತಿಳಿಸಿ, ಉತ್ತರ ಕೊಡಿಸುತ್ತೇನೆ.

(iv) ಮಸ್ಕಿ ನಾಲಾ ಹಾಗೂ ಹಿರೇಹಳ್ಳಿ ಯೋಜನೆಯ ಸಬ್ ಡಿವಿಜನ್‌ಗಳನ್ನು ತೆಗೆದು ಹಾಕಿರುವುದರಿಂದ ತೊಂದರೆಯಾಗಿರುವುದು

ಶ್ರೀ ಆರ್. ವೆಂಕಟರಾಮಯ್ಯ — ಮಾನ್ಯ ಅಧ್ಯಕ್ಷರೇ, ರಾಯಚೂರು ಜಿಲ್ಲೆಯ ಮಸ್ಕಿನಾಲಾ ಯೋಜನೆಗೆ (ಲಿಂಗಸೂಗೂರು ತಾಲ್ಲೂಕು) ೫೫ ಲಕ್ಷ ರೂಪಾಯಿಗಳ ಕೆಲಸ ಮುಂದುವರಿಸಲು ಮಂಜೂರ ಮಾಡಲಾಗಿದ್ದು, ಆದೇ ಸಮಯದಲ್ಲಿ ಪಿ.ಡಬ್ಲ್ಯೂ.ಡಿ ಸಬ್ ಡಿವಿಜನ್ ಕಚೇರಿಯನ್ನು ಅಲ್ಲಿಂದ ತೆಗೆಯಲು ಆದೇಶ ಹೊರಡಿಸಲಾಗಿದೆ. ಇದೇ ರೀತಿ ಹಿರೇಹಳ್ಳಿ (ಕೊಪ್ಪಳ ತಾಲ್ಲೂಕು) ಸಬ್ ಡಿವಿಜನ್ ಕಚೇರಿಯನ್ನು ತೆಗೆದು ಹಾಕಲು ಆದೇಶ ಹೊರಡಿಸಿದ್ದು ಇದರಿಂದ ಬರಗಾಲ ಪ್ರದೇಶದಲ್ಲಿ ತೀವ್ರಗತಿಯಲ್ಲಿ ನೀರಾವರಿ ಯೋಜನೆಗಳನ್ನು ಮಂಜಿಸಬೇಕಾಗಿರುವಾಗ, ಈ ರೀತಿ ಸಬ್ ಡಿವಿಜನ್ ತೆಗೆದು ಹಾಕುವುದರಿಂದ ಕೆಲಸಕ್ಕೆ ತೊಂದರೆಯಾಗುತ್ತಿದೆ.

ಈ ಸಬ್ ಡಿವಿಜನ್‌ಗಳು ಮುಂದುವರಿಯುವಂತೆ ಆದೇಶ ನೀಡಿ, ತುರ್ತಾಗಿ ಕೆಲಸ ಮುಂದುವರಿದು ಬರಗಾಲ ಪ್ರದೇಶದ ಹತ್ತಾರು ಸಾವಿರ ಎಕರೆ ಭೂಮಿಗೆ ನೀರೊದಗಿಸಿ ಶಾಶ್ವತ ಪರಿಹಾರ ದೊರೆಯುವಂತೆ ಮಾಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.— ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರಿ ಆಜ್ಞೆಯನ್ನು ತಡೆಹಿಡಿಯಲಾಗಿದೆ.

ಅಧ್ಯಕ್ಷರು.— ಎಂ. ಶಿವಣ್ಣ ಗೈರುಹಾಜರಿ.

(v) ಉಲ್ಲಾಳದಲ್ಲಿರುವ ಮಾರ್ಚುಯರಿ ಕಟ್ಟಡವನ್ನು ದುರಸ್ತಿ ಪಡಿಸುವುದು

ಶ್ರೀ ಬಿ. ಎಂ. ಇದಿನಬ್ಬ.— ಮಂಗಳೂರು ತಾಲ್ಲೂಕು ಉಲ್ಲಾಳದಲ್ಲಿರುವ ಮಾರ್ಚುಯರಿ ಕಟ್ಟಡವನ್ನು ದುರಸ್ತಿ ಪಡಿಸುವ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಮಾರ್ಚುಯರಿಗೆ ಕಟ್ಟಡವನ್ನು ಆದಷ್ಟು ಬೇಗ ರಿಪೇರಿ ಮಾಡಿಕೊಡಬೇಕೆಂದು ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯಲಾಗಿದೆ. ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

(v) ಉಡುಪಿಯಲ್ಲಿ ಅಗ್ನಿಶಾಮಕ ದಳಕ್ಕೆ ಒದಗಿಸಲಾದ ನೀರು ಪೂರೈಕೆ ವಾಹನ ಅನುಪಯುಕ್ತವಾಗಿರುವುದು

ಶ್ರೀಮತಿ ಮಂನೋರಮಾ ವಂಧ್ವರಾಜ್.—ಮಾನ್ಯ ಅಧ್ಯಕ್ಷರೇ, ಉಡುಪಿಯಲ್ಲಿರುವ ಅಗ್ನಿಶಾಮಕ ದಳಕ್ಕೆ ಒದಗಿಸಲಾದ ಮಂಗಳೂರು ನೀರು ಪೂರೈಕೆ ವಾಹನಗಳು ಬಹುಕಾಲದಿಂದ ಹಾಳಾಗಿ ಅನುಪಯುಕ್ತ ಸ್ಥಿತಿಯಲ್ಲಿದ್ದು ಕೇವಲ ಒಂದು ವಾಹನ ಮಾತ್ರ ಕೆಲಸ ಮಾಡುತ್ತಲಿದೆ, ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದಾಗ ತಾತ್ಕಾಲಿಕವಾಗಿ ಮೈಸೂರಿನಿಂದ ಒಂದು ಚಿಕ್ಕ ವಾಹನವನ್ನು ಒದಗಿಸಲಾಯಿತು. ಇದು ಸ್ಥಳೀಯ ಅವಶ್ಯಕತೆಗಳಿಗೆ ಏನೇನೂ ಸಾಲದಾದ್ದರಿಂದ ಒಂದು ಹೊಸ ವಾಹನವನ್ನು ಶಾಶ್ವತ ನೆಲೆಯಲ್ಲಿ ಬೆಂಗಳೂರಿನಿಂದಲೇ ಒದಗಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.— ಈಗಾಗಲೇ ಒಂದು ಯೂನಿಟನ್ನು ಕಳುಹಿಸಿಕೊಟ್ಟಿದ್ದೇನೆ. ಹಣದ ವ್ಯವಸ್ಥೆ ನೋಡಿಕೊಂಡು ಶಾಶ್ವತವಾಗಿ ಕೊಡುವುದಕ್ಕೆ ಪರಿಶೀಲನೆ ಮಾಡಲಾಗುವುದು.

(vi) ಪುತ್ತೂರು ತಾಲ್ಲೂಕಿನ ಸಂಬ್ರಹ್ಮಣ್ಯ ಹೆದ್ದಾರಿಯಲ್ಲಿ ಬರುವ ನೆಲ್ಯಾಡಿ-ಬಲ್ಯ-ಹೊಸ ಮಠ ರಸ್ತೆಯ ರಿಪೇರಿ ವಂತರ್ತಿ ಬಸ್ಸನ್ನು ಓಡಿಸುವುದು

ಶ್ರೀ ಕೆ. ಕುಶಾಲ.— ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಸುಬ್ರಹ್ಮಣ್ಯ ಹೆದ್ದಾರಿಯಲ್ಲಿ ಬರುವ ನೆಲ್ಯಾಡಿ-ಬಲ್ಯ-ಹೊಸಮಠ ರಸ್ತೆಯು ಲೋಕೋಪಯೋಗಿ ಇಲಾಖೆ ರಸ್ತೆಯಿದ್ದು ಈ ರಸ್ತೆಯನ್ನು ಇಲಾಖೆಯಿಂದ ಹಲವು ವರ್ಷಗಳಿಂದ ರಿಪೇರಿ ಮಾಡದೆ ನಾದುರಸ್ತಿಯಲ್ಲಿದ್ದ ರಸ್ತೆಯಂನ್ನು ೨-೩ ಊರಿನ ಗ್ರಾಮಸ್ಥರು ಅವರ ಶ್ರಮದಾನದ ಮೂಲಕ ಸದರಿ ರಸ್ತೆಯನ್ನು ದುರಸ್ತಿ ಮಾಡಿಸಿದ್ದರು. ಈ ರಸ್ತೆಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ನೆಲ್ಯಾಡಿ-ಬಲ್ಯ-ಹೊಸಮಠ ಹಾಗೂ ಕಲ್ಲುಗುಡ್ಡೆ ಎಂಬಲ್ಲಿಗೆ ಇಲ್ಲಿಯ ಸಾವಿರಾರು ಸಾರ್ವಜನಿಕರಿಗೆ ಹಾಗೂ ಶಾಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ಬಸ್ಸನ್ನು ಓಡಿಸಲು ೨-೩ ತಿಂಗಳುಗಳಿಂದ ಸಂಬಂಧಪಟ್ಟ ಇಲಾಖಾ ಸಚಿವರುಗಳಿಗೆ ಮನವಿ ಮಾಡಿಕೊಂಡರೂ, ಸರ್ಕಾರ-ಇಲಾಖೆ ಈ ತನಕ ಸಾರಿಗೆ ವ್ಯವಸ್ಥೆ ಕ್ರಮ ಕೈಗೊಂಡಿರುವುದಿಲ್ಲ.

ಇಲ್ಲಿಯ ನಾಗರೀಕರು ದಿನಾಂಕ ೨೦-೨-೧೯೮೬ ರಂದು ನೆಲ್ಯಾಡಿ ಎಂಬಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರ ವಿಳಂಬ ನೀತಿಗೆ ಮಂಪ್ಪರ ಹೂಡಲು ನಿರ್ಧರಿಸಿರುವುದು ತಿಳಿದು ಬಂದಿದೆ. ಸಂಬಂಧಪಟ್ಟ ಇಲಾಖೆಗೆ, ಸಚಿವರಿಗೆ, ಪೋಲೀಸ್ ಇಲಾಖೆಗೆ ಲಿಖಿತ ಮೂಲಕ ತಿಳಿಸಿರುತ್ತಾರೆ. ಆದುದರಿಂದ ಸಂಬಂಧಪಟ್ಟ ಇಲಾಖೆ ಸಚಿವರು ಸಾರಿಗೆ ವ್ಯವಸ್ಥೆಯನ್ನು ನೀಡುವಂತೆ ಕೂಡಲೇ ಕ್ರಮ ಕೈಗೊಳ್ಳಬೇಕಾಗಿ ಸರ್ಕಾರವನ್ನು ವಿನಂತಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಸ್ವಾಮಿ, ಸುಳ್ಯ ತಾಲ್ಲೂಕು, ರಾಷ್ಟ್ರೀಕರಣ ಆಗದೇ ಇರತಕ್ಕ ಪ್ರದೇಶ. ನಮ್ಮ ಬಸ್ಸುಗಳು ಹೋಗಲಿಕ್ಕೆ ಅವಕಾಶ ಇದೆಯೋ ಇಲ್ಲವೋ ಗೊತ್ತಿಲ್ಲ. ಈ ಬಗ್ಗೆ ವಿಚಾರಿಸುತ್ತೇನೆ.